ಕೇಂದ್ರ ಸರ್ಕಾರದಿಂದ ಒಂದು ತಂಡ ಬರುವ ಸೂಚನೆಗಳು ಇವೆ. ಅವರು ಬಂದಾಗ ಶಕಾರಿಪುರ ತಾಲ್ಲೂಕಿನ ಬಗ್ಗೆಯೂ ಹೇಳಿ ಕ್ರಮ ತೆಗೆದುಕೊಳ್ಳುತ್ತೇನೆಂದು ಭರವಸೆ ಕೊಡುತ್ತೇನೆ.

11 ಸಂಕೇಶ್ವರ ಪಟ್ಟಣದ ಕುರಣಿಕೊಳವೆ ಬಾವಿಯಿಂದ ನೀರು ಸರಬರಾಜು ಯೋಜನೆ ಪ್ರಾರಂಭಿಸದಿರುವುದು

ಶ್ರೀ ವಂಟ್ಲಾರಿಗೌಡ ಎಸ್. ಪಾಟೀಲ್.—ಮಾನ್ಯ ಅಧ್ಯಕ್ಷರೇ, ದಿನಾಂಕ ೫-೫-೧೯೮೭ ರಿಂದ ಕೈಗೊಂಡಿರುವ ಅಮರಣಾಂತ ಉಪವಾಸದ ಸತ್ಯಾಗ್ರಹದ ಹಿನ್ನೆಲೆಯಲ್ಲಿ ಸಂಕೇಶ್ವರ ಪಟ್ಟಣದ ಕುಡಿಯುವ ನೀರಿನ ತಾತ್ಕಾಲಿಕ ಕುರಣಿ ಕೊಳವೆ ಬಾವಿಯಿಂದ ನೀರು ಸರಬರಾಜು ಯೋಜನೆಗೆ ೫೦ ಲಕ್ಷ ರೂಪಾಯಿ ಮಂಜೂರು ಮಾಡಲಾಗಿದೆಯೆಂದು ಆಬಕಾರಿ ಸಚಿವರು ಸಂಕೇಶ್ವರಕ್ಕೆ ಬಂದು ಸಾರ್ವಜನಿಕ ಹೇಳಿಕೆಯನ್ನು ನೀಡಿರುತ್ತಾರೆಆದರೆ ಈ ಕೆಲಸವು ಪ್ರಾರಂಭವಾಗಲು ತಡವಾಗುತ್ತಿರುವುದು ಖಂಡನೀಯ.

ಮಾನ್ಯ ಮುಖ್ಯ ಮಂತ್ರಿಗಳು ಸಂಕೇಶ್ವರ ಪಟ್ಟಣಕ್ಕೆ ಶಾಶ್ವತ ಕುಡಿಯುವ ನೀರಿನ ವಿಷಯದಲ್ಲಿ ನನಗೆ ಪತ್ರ ಬರೆದಿದ್ದು, ''ಕರ್ಪೂರ ಹಳ್ಳದ ಕೆರೆ ನಿರ್ಮಾಣದ'' ನೀಲನಕ್ಷೆ ಹಾಗೂ ಯೋಜನೆ ಪರಿಶೀಲನೆಯಲ್ಲಿದೆಯೆಂದು ತಿಳಿಸಿರುತ್ತಾರೆ. ಈ ಕೆರೆಯು ನಿರ್ಮಾಣದಿಂದ ಸಂಕೇಶ್ವರ ಪಟ್ಟಣದ ಕುಡಿಯುವ ನೀರಿನ ಸಮಸ್ಯೆ ಬಗೆಹರಿಯುವುದಲ್ಲದೆ ರೈತಾಪಿ ವರ್ಗಕ್ಕೆ ಹಾಗೂ ಸುತ್ತಮುತ್ತಲಿನ ಗ್ರಾಮಗಳಿಗೆ ಒಂದು ವರದಾನವಾಗುತ್ತದೆ. ಕಾರಣ ಯಾವುದೇ ರಾಜಕೀಯ ಹಾಗೂ ಪಟ್ಟಭದ್ರ ಹಿತಾಸಕ್ತಿಗಳಿಗೆ ಮಣಿದು ಈ ಯೋಜನೆಯನ್ನು ಕೈ ಬಿಟ್ಟಲ್ಲಿ ಸಂಕೇಶ್ವರ ಪಟ್ಟಣಕ್ಕೆ ಶಾಶ್ವತ ನೀರಿನ ತೊಂದರೆ ಯಾಗುವುದರಲ್ಲಿ ಸಂದೇಹವಿಲ್ಲ. ಕಾರಣ ಈ ವಿಷಯದಲ್ಲಿ ಸರಕಾರದ ನಿರ್ದಿಷ್ಟ ಹೇಳಿಕೆಯನ್ನು ಹಾಗೂ ಕಾರ್ಯಕ್ರಮವನ್ನು ಸದನದಲ್ಲಿ ಹೇಳಿಕೆ ನೀಡುವಂತೆ ಒತ್ತಾಯಿಸುತ್ತೇನೆ. ಒಂದು ವೇಳೆ ನಿರ್ದಿಷ್ಟ ಹೇಳಿಕೆ ಬಾರದಿದ್ದಲ್ಲಿ ನಾನು ಹಿಂತೆಗೆದುಕೊಂಡಿರುವ ಉಪವಾಸದ ಬಗ್ಗೆ ಯೋಚನೆ ಮಾಡಬೇಕಾಗುತ್ತದೆ.

ಶ್ರೀ ಎಂ. ಚಂದ್ರಶೇಖರ್.—ಅಧ್ಯಕ್ಷರೇ, ಮಾನ್ಯ ಸದಸ್ಯರು ಎಂತ್ಹ ಉಪವಾಸ ಮಾಡುವಂತಹ ಪ್ರಮೇಯ ಬರಬಾರದೆಂದು ನಮ್ಮ ಆಶ ಕೂಡ ಆಗಿದೆ. ಮಾನ್ಯರು ಉಪವಾಸವನ್ನು ಈ ಬಗ್ಗೆ ಮಾಡಿದ್ದು ಉಂಟು. ಮಾಡಿದ ಸಮಯದಲ್ಲಿ ಸರಕಾರ ಈಗಾಗಲೇ ಕೆಲಸ ಕಾರ್ಯಗಳು ಆಗುತ್ತಿರುವುದನ್ನು ತೀವ್ರವಾಗಿ ಕ್ರಮಗಳನ್ನು ತೆಗೆದುಕೊಂಡಿದೆ. ಕುರಣಿ ಪ್ರದೇಶದಲ್ಲಿ ಕೊಳವೆ ಬಾವಿಗಳು ಸ್ವಲ್ಪ ಹೆಚ್ಚು ನೀರು ಬರುವಂತಹ ಕೊಳವೆಬಾವಿಗಳು ದೊರಕುತ್ತದೆ ಎಂಬ ಕಾರಣದಿಂದ ೫೦ ಲಕ್ಷ ರೂಪಾಯಿಗಳ ಒಂದು ಅಂದಾಜಿನ್ನು ಮಂಜೂರು ಮಾಡಲಾಗಿದೆ. ಆದಕ್ಕಾಗಿ ೨೫ ಲಕ್ಷ ರೂಪಾಯಿಗಳನ್ನು ಬಿಡುಗಡೆ ಮಾಡಲಾಗಿದೆ. ಕಾಮಗಾರಿಗಳನ್ನು ತೆಗೆದುಕೊಂಡಿದೆ ಅಂದಾಜು ಪಟ್ಟಿಯು ಸಿದ್ಧವಾಗಿ ಟೆಂಡರನ್ನು ಕರೆದಿದ್ದಾರೆ. ಆ ಕೆಲಸಕಾರ್ಯಗಳನ್ನು ಆದಷ್ಟು ಜಾಗೃತೆ ಈ ವರ್ಷದ ಬೇಸಿಗೆ ಬರುವುದರೊಳಗಾಗಿ ಈ ಕೊಳವೆ ಬಾವಿಗಳ ಮುಖಾಂತರ ನೀರನ್ನು ಕೊಡುವ ವ್ಯವಸ್ಥೆಯನ್ನು ಮಾಡುತ್ತೇವೆ. ಆದರೆ ಶಾಶ್ವತವಾದಂತಹ ಕುಡಿಯುವ ನೀರಿನ ವ್ಯವಸ್ಥೆಯು ಸಂಕೇಶ್ವರಕ್ಕೆ ಆಗ ಬೇಕಾದಂತಹ ಅಗತ್ಯ ಇದೆ. ಈಗ ಇರುವಂತಹ ಕರ್ಪೂರಿಹಳ್ಳ ಯೋಜನೆಯನ್ನು ತೆಗೆದುಕೊಂಡಾಗ, ಮೊದಲು ಅಲ್ಲಿಯ ಸ್ಥಳೀಯ ಜನರಿಂದ ವಿರೋಧ ವ್ಯಕ್ತವಾಗಿ ಬಂತು. ಈಗ ಆ ಸ್ಥಳವನ್ನು ಸ್ಥಳಾಂತರಿಸಿದ್ದಾರೆ. ಅದಕ್ಕಾಗಿ ಎರಡು ಕೋಟಿ ರೂಪಾಯಿಗಳ ಒಂದು ಅಂದಾಜು ಸಿದ್ಧವಾಗಿದೆ. ಅಲ್ಲಿಯೂ ಕೂಡ ತೆಗೆದುಕೊಂಡಾಗ ಬೇಸಿಗೆಯಲ್ಲಿ ನೀರು ಶಾಶ್ವತವಾಗಿ ಬರುತ್ತದೆ ಎಂಬ ಗ್ಯಾರಂಟಿ ಇಲ್ಲ. ಆದುದರಿಂದ ಮತ್ತೊಂದು ಯೋಜನೆಯೂ ಸಹ ಸರಕಾರದ ಮುಂದೆ ಇದೆ. ಹುಕ್ಕೇರಿ, ಸಂಕೇಶ್ವರ, ಮತ್ತು ಮಾರ್ಗದಲ್ಲಿ ಬರತಕ್ಕಂಥ ೧೧ ಗ್ರಾಮಗಳ ಸಲುವಾಗಿ ಸಮಗ್ರ ನೀರಿನ ಪೂರೈಕೆ ಯೋಜನೆ ಒಂದು ಇದೆ. ಅದನ್ನು ಈಗ ಪರಿಶೀಲನೆ ಮಾಡಬೇಕಾಗುತ್ತದೆ. ಅದಕ್ಕೆ ಮೂರೂ ಕಡೆ ಈ ನೀರಿನ ಯೋಜನೆ ಪ್ರಾರಂಭ ಮಾಡಬಹುದೆಂದು ಇದೆ. ಘಟಪ್ರಭಾ ಜಲಾಶಯದ ಕೆಳಗಿರುವಂತಹ ಕೊಟಬಾಗಿ ಪಡು, ಹಾಗೆಯೇ ಕರ್ಪೂರಿ ಹಳ್ಳ, ಪ್ರದೇಶದಲ್ಲಿಯೂ ಕೂಡ ಸಾಧ್ಯತೆ ಇದೆ ಎಂದು ಮಂಡಳಿಯವರು ಪರಿಶೀಲನೆ ಮಾಡಿ ಅಂದಾಜು ಪಟ್ಟಿಯನ್ನು ಮಾಡಿದ್ದಾರೆ. ಅದರ ಬಗ್ಗೆ ಪರಿಶೀಲಿಸುತ್ತೇವೆ. ೫೦ ಲಕ್ಷ ರೂಪಾಯಿಗಳ ಮಂಜೂರಾದ ಯೋಜನೆಯನ್ನು ಆದಷ್ಟು ಜಾಗೃತೆ ತೆಗೆದುಕೊಳ್ಳುತ್ತೇವೆ.